File No.DPAR/22/DMT/2019-DPAR EXE A-DPAR

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿರುವ ಬ್ಯಾಂಕ್ವೆಟ್ ಹಾಲ್ ಹಾಗೂ ಸಮ್ಮೇಳನ ಸಭಾಂಗಣಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:- ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 261 ಡಿಬಿಎಂ 2018, ದಿನಾಂಕ:31.01.2019.

********

ಪ್ರಸ್ತಾವನೆ:

ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿರುವ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ ಮತ್ತು ಸಮಿತಿ ಕೊಠಡಿಗಳಿಗೆ ಸರ್ಕಾರದಿಂದ ಯೋಜಿಸುವ ಕಾರ್ಯಕ್ರಮವನ್ನು ಹೊರತುಪಡಿಸಿ, ಇತರೆಯವರು ನಡೆಸುವ ಕಾರ್ಯಕ್ರಮಗಳಿಗೆ ಬ್ಯಾಂಕ್ವೆಟ್ ಹಾಲ್‌ಗೆ ಸ್ವಚ್ಛತಾ ವೆಚ್ಚ ದಿನವೊಂದಕ್ಕೆ ಕ್ರಮವಾಗಿ ರೂ. 15,000-00(ರೂಪಾಯಿ ಹದಿನೈದು ಸಾವಿರ ಮಾತ್ರ)ಗಳನ್ನು ಪಾವತಿಸುವ ಬಗ್ಗೆ ಮೇಲೆ ಓದಲಾದ ಕ್ರಮಾಂಕ (1)ರಲ್ಲಿ ಆದೇಶ ಹೊರಡಿಸಲಾಗಿತ್ತು. ಆದರೆ, ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಚಿವಾಲಯದ ಕಛೇರಿಯ ಘನ ತ್ಯಾಜ್ಯವನ್ನು ಸಗಟು ವಿಲೇ ಮಾಡಲು ಸೂಚಿಸಿದ್ದು, ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನ ಸ್ವಚ್ಛತಾ ವೆಚ್ಚ ರೂ.50,000/- (ರೂಪಾಯಿ ಐವತ್ತು ಸಾವಿರ ಮಾತ್ರ)ಗಳನ್ನು, ವಿಧಾನಸೌಧ ಮುಂಭಾಗ ಭವ್ಯ ಮೆಟ್ಟಿಲುಗಳ ಮೇಲೆ ಆಯೋಜಿಸುವ ಕಾರ್ಯಕ್ರಮಕ್ಕೆ ಸ್ವಚ್ಛತಾ ವೆಚ್ಚ ರೂ.10,000/- (ರೂಪಾಯಿ ಹತ್ತು ಸಾವಿರ ಮಾತ್ರ)ಗಳನ್ನು ವಿಕಾಸಸೌಧ ಹಾಗೂ ಬಹುಮಹಡಿ ಕಟ್ಟಡಗಳ ಸಮ್ಮೇಳನ ಸಭಾಂಗಣದಲ್ಲಿ ಹಾಗೂ ಸಮಿತಿ ಕೊಠಡಿ ಕೊಠಡಿಗಳಲ್ಲಿ ಏರ್ಪಡಿಸುವ ಕಾರ್ಯಕ್ರಮಗಳ ಸ್ವಚ್ಛತಾ ವೆಚ್ಚ ರೂ.10,000/- (ರೂಪಾಯಿ ಹತ್ತು ಸಾವಿರ ಮಾತ್ರ)ಗಳನ್ನು ಹೆಚ್ಚಿಸಿ ನಿಗದಿಪಡಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 261 ಡಿಬಿಎಂ 2018, ದಿನಾಂಕ:31.01.2019ನ್ನು ಮುಂದುವರೆಸುತ್ತಾ, ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿನ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ, ಸಮಿತಿ ಕೊಠಡಿಗಳ ಬಾಡಿಗೆ ದರವನ್ನು ಹಾಲಿ ಇರುವ ದರಗಳಲ್ಲಿಯೇ ಮುಂದುವರೆಸಿ, ಈ ಕೊಠಡಿಗಳಿಗೆ ನಿಗದಿಪಡಿಸಿರುವ ಸ್ವಚ್ಛತಾ ವೆಚ್ಚದ ಶುಲ್ಕವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಡಿಸಭೆ 2019, ಬೆಂಗಳೂರು ದಿನಾಂಕ:24-06-2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 261 ಡಿಬಿಎಂ 2018, ದಿನಾಂಕ:31.01.2019ರಲ್ಲಿ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿರುವ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ ಮತ್ತು ಸಮಿತಿ ಕೊಠಡಿಗಳ ಬಾಡಿಗೆ ದರವನ್ನು ಹಾಲಿ ಇರುವ ದರಗಳಲ್ಲಿಯೇ ಮುಂದುವರೆಸುತ್ತಾ, ಒಂದು ದಿನಕ್ಕೆ ವಿಧಾನಸೌಧ, ವಿಕಾಸಸೌಧ ಮತ್ತು

2---

Scanned by CamScanner

File No.DPAR/22/DMT/2019-DPAR EXE A-DPAR

ಬಹುಮಹಡಿ ಕಟ್ಟಡದಲ್ಲಿರುವ ಬ್ಯಾಂಕ್ವೆಟ್ ಹಾಲ್, ಸಮ್ಮೇಳನ ಸಭಾಂಗಣ ಮತ್ತು ಸಮಿತಿ ಕೊಠಡಿಗಳ ಸ್ವಚ್ಛತಾ ವೆಚ್ಚಗಳನ್ನು ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಕ್ರ.ಸಂ | ಬ್ಯಾಂಕ್ವೆಟ್ ಹಾಲ್/ಸಮ್ಮೇಳನ ಸಭಾಂಗಣ | ಹಳೆಯ ದರ | ಪರಿಷ್ಕೃತ ದರ | ಲೆಕ್ಕ ಶೀರ್ಷಿಕೆ |
|---|---|---|---|---|
| 1. | ವಿಧಾನಸೌಧ ಬ್ಯಾಂಕ್ವೆಟ್ ಹಾಲ್ | ರೂ.10,000/- | ರೂ.50,000/- | 2052 (ಸಚಿವಾಲಯ ಸಾಮಾನ್ಯ ಸೇವೆ-090 ಸಚಿವಾಲಯ-01-ಕಸಸ-050 ಕಛೇರಿ ವೆಚ್ಚಗಳು) |
| 2. | ವಿಕಾಸಸೌಧ, ಸಮ್ಮೇಳನ ಸಭಾಂಗಣ, ಸಮಿತಿ ಕೊಠಡಿ | ಹೊಸ ಪ್ರಸ್ತಾವನೆ | ರೂ.10,000/- | 2052 (ಸಚಿವಾಲಯ ಸಾಮಾನ್ಯ ಸೇವೆ-090 ಸಚಿವಾಲಯ-01-ಕಸಸ-050 ಕಛೇರಿ ವೆಚ್ಚಗಳು) |
| 3. | ಬಹುಮಹಡಿ ಕಟ್ಟಡದ ಸಮ್ಮೇಳನ ಸಭಾಂಗಣ | ಹೊಸ ಪ್ರಸ್ತಾವನೆ | ರೂ.10,000/- | 2052 (ಸಚಿವಾಲಯ ಸಾಮಾನ್ಯ ಸೇವೆ-090 ಸಚಿವಾಲಯ-01-ಕಸಸ-050 ಕಛೇರಿ ವೆಚ್ಚಗಳು) |
| 4. | ವಿಧಾನಸೌಧ ಭವ್ಯ ಮೆಟ್ಟಿಲುಗಳ ಮೇಲೆ/ಮುಂದೆ ಆಯೋಜಿಸುವ ಕಾರ್ಯಕ್ರಮ | ಹೊಸ ಪ್ರಸ್ತಾವನೆ | ರೂ.10,000/- | 2052 (ಸಚಿವಾಲಯ ಸಾಮಾನ್ಯ ಸೇವೆ-090 ಸಚಿವಾಲಯ-01-ಕಸಸ-050 ಕಛೇರಿ ವೆಚ್ಚಗಳು) |

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 96, ದಿನಾಂಕ:10.07.1996ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎಸ್.ನಾಗರಾಜ್)
ಸರ್ಕಾರದ ಉಪ ಕಾರ್ಯದರ್ಶಿ
ಸಿ.ಆ.ಸು.ಇಲಾಖೆ (ಕಾರ್ಯಕಾರಿ)

ಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ.

ಪ್ರತಿ:-

1. ಮಹಾಲೇಖಪಾಲರು, (ಜಿ &ಎಸ್‌ಎಸ್‌ಎ)(ಎ ಮತ್ತು ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಯವರಿಗೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇಲಾಖೆ (ಲೆಕ್ಕಪತ್ರ).
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-12).
6. ಭದ್ರತಾಧಿಕಾರಿ/ವಿಕಾಸಸೌಧ/ವಿಧಾನಸೌಧ/ವಿಶೇಷಾಧಿಕಾರಿ, ಸಿಆಸುಇ (ಕಾರ್ಯಕಾರಿ), ಬಹುಮಹಡಿ ಕಟ್ಟಡ.
7. ಶಾಖಾ ರಕ್ಷಕ ಕಡತ/ಹೆಚ್ಚಿನ ಪ್ರತಿ.

Scanned by CamScanner